ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,

ಪೊನ್ನಂಪೇಟೆ

**ಸಿ.ಸಿ. ನಂ. 1015/2021 ಫ್ರಾ.ಸಾ –3**
**ಚಾ.ಸಾ – 4**

ದಿನಾಂಕಃ **14.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ತ್ರಿವೇಣಿ |
| ಗಂಡನ ಹೆಸರು | : | ಸತೀಶ್ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಶ್ರೀಮಂಗಲ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿ. 23.06.2021 ರಂದು ಮ. 02.00 ಗಂಟೆಗೆ ವಿದ್ಯುತ್ ಬಿಲ್ ಹಣ ಪಡೆಯಲು ಮನೆ ಮನೆಗೆ ಕಳುಹಿಸಿ ವಸೂಲಿ ಮಾಡಬೇಕೆಂದು ಆದೇಶವಾಗಿದೆ ಎಂದು ಹೇಳಿ, ಹಣವನ್ನು ಕೊಡಬೇಕೆಂದು, ಹಣ ಪಾವತಿಸಿದ ರಶೀದಿ 2 ತಿಂಗಳ ಒಳಗಡೆ ಕೊಡುವುದಾಗಿ ನಂಬಿಸಿ ರೂ. 420/- ಹಣವನ್ನು ಕೊಟ್ಟೆ. ನನಗೆ ಅನುಮಾನ ಬಂದಿದ್ದು, ನಾನು ಆರೋಪಿಯ ವಿಡಿಯೋವನ್ನು ಮಾಡಿರುತ್ತೇನೆ. ಆರೋಪಿ ಮುಾಗಿಗೆ ಮಾಸ್ಕ್ ಹಾಕಿದ್ದ. ನಾನು ಅಕ್ಕಪಕ್ಕದವರ ಮನೆಯವರನ್ನು ವಿಚಾರಿಸಿ ಖಾತ್ರಿಪಡಿಸಿ ಆರೋಪಿಗೆ ಹಣ ನೀಡಿರುತ್ತೇನೆ. ನಂತರ ಈ ಬಗ್ಗೆ ಚೆಸ್ಕಾಂರವರು ಶ್ರೀಮಂಗಲ ಪೊ. ಠಾಣೆಗೆ ದೂರು ನೀಡಿರುವ ವಿಚಾರ ಗೊತ್ತಾಯಿತು.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿ. 27.06.2021 ರಂದು ಶ್ರೀಮಂಗಲ ಪೊಲೀಸರು ನಮ್ಮ ಮನೆ ಬಳಿ ಬಂದು ಬೆ. 11.00 ರಿಂದ 11.45 ತನಕ ಮಹಜರ್ ಮಾಡಿದರು ಎಂದರೆ ಸರಿ, ಆ ಸಮಯದಲ್ಲಿ ಸ್ಥಳದಲ್ಲಿ

ಮಹಜರ್‌ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 8 ಎಂದು ಸಹಿಯನ್ನು ನಿ. ಪಿ. 8(ಎ) ಎಂದು ಗುರುತಿಸಲಾಯಿತು. ಮಹಜರ್ ವೇಳೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 9 ಎಂದು ಗುರುತಿಸಲಾಯಿತು. ನಾನು ಮಾಡಿದ ವಿಡಿಯೋವನ್ನು ಚಾಸಾ 1 ರವರಿಗೆ ನೀಡಿರುತ್ತೇನೆ ಎಂದರೆ ಸರಿ. ಅದನ್ನು ಈಗಾಗಲೇ ನಿ. ಪಿ 1 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಅವರು ತೆಗೆದಂತಹ ವಿಡಿಯೋವನ್ನು ನ್ಯಾಯಾಲಯದಲ್ಲಿ ತೋರಿಸಲಾಯಿತು. ಈ ದಿನ ನ್ಯಾಯಾಲಯದಲ್ಲಿ ಆರೋಪಿ ಗೈರು ಹಾಜರಾಗಿರುತ್ತಾರೆ. ಆರೋಪಿ ಪರ ವಕೀಲರು ಆರೋಪಿಯನ್ನು ವಿಡಿಯೋದಲ್ಲಿ ಗುರುತಿಸಿರುವುದಿಲ್ಲ. ಆದ್ದರಿಂದ ಆರೋಪಿಯನ್ನು ಗುರುತು ಹಚ್ಚಲು ಮುಂದಿನ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ